1	2	3	4	5
ಕೊರಟಗೆರೆ	0.13	–	–	0.10
ಪಾವಗಡ	0.13	0.25	0.10	–
ಮಧುಗಿರಿ	0.12	–	–	–
ಕುಣಿಗಲ್	0.06	–	10.10	0.10
ತಿಪಟೂರು	0.16	0.25	–	0.10
ಶಿರಾ	0.06	0.25	0.10	–
ಚಿ. ನಾ.ಹಳ್ಳಿ	0.18	0.25	–	–
ತುರುವೇಕೆರೆ	0.16	–	0.10	–
2002-2003ನೇ ಸಾಲಿನಲ್ಲಿ (ರೂ ಲಕ್ಷಗಳಲ್ಲಿ)				
ತುಮಕೂರು	0.29	0.50	0.10	–
ಗುಬ್ಬಿ	0.08	0.50	0.10	–
ಕೊರಟಗೆರೆ	0.15	–	–	–
ಪಾವಗಡ	0.21	–	0.10	–
ಮಧುಗಿರಿ	0.19		0.10	–
ಕುಣಿಗಲ್	0.12	0.25	0.10	–
ತಿಪಟೂರು	0.18	–	–	–
ಶಿರಾ	0.08	–	–	–
ಚಿ. ನಾ.ಹಳ್ಳಿ	0.13	–	–	–
ತುರುವೇಕೆರೆ	0.35	–	0.25	–
ತುರುವೆಕೆರೆ			ತರಬೇತಿ ಶಿಬಿರಕ್ಕೆ – 0.12	

ಶಿಕಾರಿಪುರ ಮಿನಿ ವಿಧಾನ ಸೌಧದ ಕಾಮಗಾರಿ

3326 (3755) : ಶ್ರೀ ಮಹಾಲಿಂಗಪ್ಪ ಬಿ.ಎನ್ (ಶಿಕಾರಿಪುರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿಕಾರಿಪುರ ಮಿನಿ ವಿಧಾನ ಸೌಧ ಕಟ್ಟಡಕ್ಕೆ ಮಂಜೂರಾದ ಹಣವೆಷ್ಟು;

ಆ) ಕಾಮಗಾರಿ ಕೆಲಸ ಪೂರ್ಣಗೊಂಡಿದೆಯೇ;

ಇ) ಕಾಮಗಾರಿ ಕೆಲಸ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ) ಮಂಜೂರಾದ ಹಣ ರೂ. 45.00 ಲಕ್ಷಗಳು

ಆ) ಮಂಜೂರು ಅಂದಾಜಿನಲ್ಲಿ ನೆಲಮಹಡಿ ಹಾಗೂ ಮೊದಲನೇ ಮಹಡಿ ಕಾಮಗಾರಿಗಳಿದ್ದು, ಪ್ರಸ್ತುತ ನೆಲಮಹಡಿ ಕಾಮಗಾರಿ ಪೂರ್ಣಗೊಂಡಿದ್ದು ದಿನಾಂಕ: 19.2.2001 ರಂದು ಸಂಬಂಧಪಟ್ಟ ಇಲಾಖೆಗೆ ಹಸ್ತಾಂತರಿಸಲಾಗಿರುತ್ತದೆ.

ಇ) ಬಂದಿರುತ್ತದೆ.

ಈ) ಲೋಕಾಯುಕ್ತ ಬೆಂಗಳೂರು ಇವರಿಂದ ವಿಚಾರಣೆಯಾಗಿದ್ದು ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿರುತ್ತದೆ.

ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿನಲ್ಲಿ ಮಿನಿ ವಿಧಾನ ಸೌಧದ ಕಟ್ಟಡ

3327 (4035) : ಶ್ರೀ ನಾಯಕ್ ಜೆ.ಡಿ. (ಭಟ್ಕಳ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕಿನ ಮಿನಿ ವಿಧಾನಸೌಧದ ಕಟ್ಟಡದ ಪ್ರಗತಿ ಯಾವ ಹಂತದಲ್ಲಿ ಇದೆ;

ಆ) ಕಟ್ಟಡದ ಕಾಮಗಾರಿಗಳನ್ನು ಎಂದು ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ನಿರ್ಮಾಣ ಕಾಯ್ ಪ್ರಾರಂಭವಾಗಿಲ್ಲ.

ಆ) ಸಂಪನ್ಮೂಲ ಕ್ರೋಡೀಕರಿಸಿದ ನಂತರ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

ರಾಜ್ಯದಲ್ಲಿ ಮಾಹಿತಿ ಸಿಂಧು ಯೋಜನೆ

3328 (4036) : ಶ್ರೀ ನಾಯಕ್ ಜೆ.ಡಿ. (ಭಟ್ಕಳ) ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಹಿತಿ ಸಿಂಧು ಯೋಜನೆಯಡಿ ಕಂಪ್ಯೂಟರ್‌ಗಳನ್ನು ಉಳಿದ ಹೈಸ್ಕೂಲ್ ಹಾಗೂ ಜ್ಯುನಿಯರ್ ಕಾಲೇಜುಗಳಿಗೆ ಬಂದಾಗ ಒದಗಿಸಲಾಗುವುದು?

ಶ್ರೀ ಪ್ರೋ ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಕೇಂದ್ರ ಸರ್ಕಾರದ ನೆರವಿನ ಎರಡು ಪ್ರತ್ಯೇಕ ಯೋಜನೆಗಳ ಅನ್ವಯ, 2003–04ನೇ ಸಾಲಿನಲ್ಲಿ ಕಂಪ್ಯೂಟರ್ ಶಿಕ್ಷಣ ಯೋಜನೆಯನ್ನು ರಾಜ್ಯದ 238 ಸರ್ಕಾರಿ ಪ್ರೌಢಶಾಲೆ / ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ವಿಸ್ತರಿಸಲು ಕ್ರಮ ಕೈಗೊಳ್ಳಲಾಗಿದೆ. ಮಾಹಿತಿ ಸಿಂಧು ಯೋಜನೆಯಡಿಯಲ್ಲಿ ಕಂಪ್ಯೂಟರ್ ಶಿಕ್ಷಣದ ಸೌಲಭ್ಯವನ್ನು ರಾಜ್ಯದಲ್ಲಿರುವ ಉಳಿದ ಸರ್ಕಾರಿ ಪ್ರೌಢಶಾಲೆ / ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ವಿಸ್ತರಿಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ಭಟ್ಕಳ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಕರಾವಳಿ ಪ್ರದೇಶವನ್ನು ಪ್ರವಾಸೋದ್ಯಮವನ್ನಾಗಿ ಅಭಿವೃದ್ಧಿಗೊಳಿಸುವುದು

3329 (4037) : ಶ್ರೀ ನಾಯಕ್ ಜೆ.ಡಿ. (ಭಟ್ಕಳ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಭಟ್ಕಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಾವ ಕರಾವಳಿ ಪ್ರದೇಶವನ್ನು ಪ್ರವಾಸೋದ್ಯಮದ ಅಭಿವೃದ್ಧಿಪಡಿಸಲು ಕೈಗೆತ್ತಿಕೊಳ್ಳಲಾಗಿದೆ?

ಆ) ಸದರಿ ಅಭಿವೃದ್ಧಿಗೆ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು)

ಅ) ಕರ್ನಾಟಕ ಕರಾವಳಿ ಪ್ರದೇಶದ ಸಮಗ್ರ ಅಭಿವೃದ್ಧಿ ಯೋಜನೆಯಡಿಯಲ್ಲಿ ಭಟ್ಕಳ ವಿಧಾನಸಭಾ ಕ್ಷೇತ್ರದಲ್ಲಿ ಬರುವ ಅಪ್ಸರಕೊಂಡ ಹಾಗೂ ಐತಿಹಾಸಿಕ ಜೈನ ಬಸದಿ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದು ಮಂಜೂರಾತಿ ನಿರೀಕ್ಷಿಸಲಾಗಿದೆ.